ಅಧ್ಯಕ್ಷರು : ನಿಮಗೆ ನನ್ನ ನಮಸ್ಕಾರ. ನೀವು ಇವತ್ತು ಮತ್ತು ನಾಳೆ ಸ್ವಲ್ಪ ದೇವರಂತೆ ಕುಳಿತುಕೊಂಡುಬಿಡಿ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು :

ವಿಷಯ : ಕೊಡಗು ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಜಮ್ಮಾ, ಬಾಣೆ, ಕಾಣೆ ಮತ್ತು ಉಳಿದ ಜಮೀನುಗಳ ಬಗ್ಗೆ ಕಂದಾಯ ಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರತಿಪಕ್ಷದ ನಾಯಕರೆಲ್ಲಾ ಸೇರಿ ಬಹಳ ಗಂಭೀರವಾದಂತಹ ವಿಚಾರದ ಬಗ್ಗೆ ಪ್ರಸ್ತಾಪಿಸಲು ನೋಟೀಸ್ ನೀಡಿದ್ದಾರೆ. ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಜಮ್ಮಾ, ಬಾಣೆ, ಕಾಣೆ ಬಾಣೆ ಮತ್ತು ಇನ್ನೂ ಅನೇಕ ರೀತಿಯ ಜಮೀನುಗಳಿದ್ದು, ಆ ಜಮೀನುಗಳನ್ನು ತಲತಲಾಂತರ ಗಳಿಂದ ಅನುಭವಿಸುತ್ತಾ ಕೃಷಿ ಚಟುವಟಿಕೆಯನ್ನು ಅಲ್ಲಿನವರು ಮಾಡುತ್ತಿದ್ದಾರೆ. ಆದರೆ ಇವತ್ತು ನಮ್ಮ ಕಂದಾಯ ಕಾರ್ಯದರ್ಶಿಗಳು ಸುತ್ತೋಲೆಗಳನ್ನು ಹೊರಡಿಸುವುದರ ಮೂಲಕ ಅಲ್ಲಿ ರೈತರಿಗೆ ತುಂಬಾ ಗೊಂದಲದ ವಾತಾವರಣ ಉಂಟಾಗಿದೆ. ಅವರು ಸಾಲ, ಸವಲತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಆಗದೇ ಉಸಿರು ಕಟ್ಟುವಂತಹ ಪರಿಸ್ಥಿತಿ ಉಂಟಾಗಿದೆ. ಇದರ ಬಗ್ಗೆ ನಾನು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ರೆವಿನ್ಯೂ ಮಿನಿಸ್ಟರ್‌ರವರು ಮಾತನಾಡಿದ್ದೇವೆ. ಮಾನ್ಯ ರೆವಿನ್ಯೂ ಮಿನಿಸ್ಟರ್ ಬಂದ ತಕ್ಷಣ, ನಾವೇನು ಈ ಮನೆಗೆ ಭರವಸೆಯನ್ನು ಕೊಟ್ಟಿದ್ದೇವೋ, ಅದೇ ರೀತಿ ಈ ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಇತರ ಜಿಲ್ಲೆಗಳಲ್ಲಿ ಈ ಜಮೀನಿಗೆ ಸಂಬಂಧಪಟ್ಟಂತೆ, ಅವರಿಗೇನು ರೈಟ್ಸ್ ಇದೆಯೋ, ಅದು ಅನೇಕ ಶತಮಾನಗಳಿಂದ, ಬಹಳ ವರ್ಷಗಳಿಂದ, ಅವರ ತಾತ ಮುತ್ತಾಂದಿರ ಕಾಲದಿಂದ ಅವರ ಜೊತೆಯಲ್ಲಿದೆ. ಅದಕ್ಕೆ ನಾವು ಕೈ ಹಾಕುವಂತಾದ್ದು ಯಾವುದೇ ರೀತಿಯಿಂದಲೂ ಸಾಧ್ಯವಿಲ್ಲ. ಮಾನ್ಯ ಕಂದಾಯ ಸಚಿವರಿಗೆ ಹೇಳಿ, ನಾವು ಈ ಒಂದು ಸುತ್ತೋಲೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆ ಒಂದು ಹಿನ್ನೆಲೆಯಲ್ಲಿ ವಿವರವಾದಂತಹ Statement ವೊಂದನ್ನು ಮಾನ್ಯ ಕಂದಾಯ ಸಚಿವರಿಗೆ ಮಾಡಲಿಕ್ಕೆ ನಾನು ಹೇಳುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಆದೇಶ ಮಾಡಿದ್ದರೂ ಅಧಿಕಾರಿಗಳು ಅದನ್ನು ವಾಪಸ್ಸು ತೆಗೆದುಕೊಂಡಿಲ್ಲ. ಮಾನ್ಯ ಕಂದಾಯ ಸಚಿವರು ಆದೇಶ ಮಾಡಿ ಬಹಳ ತಿಂಗಳುಗಟ್ಟಲೆಯಾಗಿದೆ. ಮಾನ್ಯ ಸಚಿವರು ಮಾಡಿದ ಆದೇಶಕ್ಕೆ ಬೆಲೆ ಕೊಡದ ಅಧಿಕಾರಿಗಳಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಹೆಗ್ಡೆಯವರೆ, ಈಗ ತಾವು ಮಾತನಾಡಿ. ದಯಮಾಡಿ ಯಾರೂ ತಪ್ಪು ಭಾವಿಸಬಾರದು. ಇಂದು ಚರ್ಚೆಯ ಕೊನೆಯ ದಿನವಾಗಿದ್ದರಿಂದ ಬಹಳ ಜನ ಮಾತನಾಡುವವರಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇದೇ ವಿಷಯದ ಬಗ್ಗೆ 11 ಗಂಟೆಗೆ ಸಭೆಯೊಂದನ್ನು ಕರೆದಿದ್ದಾರೆ. ಇದರ ಬಗ್ಗೆ ಮಧ್ಯಾಹ್ನ ಅಥವಾ ಸಾಯಂಕಾಲದೊಳಗೆ ಏನಾದರೊಂದು ಪರಿಹಾರ ಹುಡುಕಿ, ಇವತ್ತು ಅಥವಾ ನಾಳೆ Statement ಅನ್ನು ಮಾಡಿಸುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆಯೆ 11 ಗಂಟೆಗೆ ಸಭೆಯೊಂದನ್ನು ಕರೆದಿದ್ದಾರೆ ಎಂಬುದನ್ನು ಗಮನಕ್ಕೆ ತರಬಯಸುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಹೆಗ್ಡೆಯವರೆ, ಆದಷ್ಟು ಬೇಗ ಎಲ್ಲರೂ ಕಡಿಮೆ ಅವಧಿ ಮಾತನಾಡಿ. ಇದರಿಂದ ಎಲ್ಲರಿಗೂ ಅವಕಾಶವಾಗುತ್ತದೆ.

4. ವಿತ್ತೀಯ ಕಾರ್ಯಕಲಾಪಗಳು :

2007–08ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಈ ಚರ್ಚೆ ಪ್ರಾರಂಭವಾದ ಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲೇ ಕುಳಿತು ಎಲ್ಲರ ಮಾತನ್ನು ಕೇಳುತ್ತಿದ್ದಾರೆ. ಇದು ಬಹಳ ಸಂತೋಷದ ವಿಚಾರವಾಗಿದೆ. ಬೇರೆ ಮಂತ್ರಿಗಳು ಯಾರೂ ಇಲ್ಲದಿದ್ದರೂ, ಅವರೊಬ್ಬರೇ ಕುಳಿತುಕೊಂಡು ಕೇಳುತ್ತಿದ್ದಾರೆ, ಸಂತೋಷ. ಈಗ ನಾನು ಪ್ರಾರಂಭ ಮಾಡುತ್ತಿರುವುದು ಏನೆಂದರೆ, ತಾವು ಸದನದಲ್ಲಿ ಕುಳಿತಿದ್ದಾಗ ಸಚಿವ ಸಂಪುಟದ ಸದಸ್ಯರೊಬ್ಬರು 'ಉಪ ಮುಖ್ಯಮಂತ್ರಿಗಳು incompetent' ಎಂದು ಹೇಳಿದರು. ಇಂತಹ ಒಂದು ಪರಿಸ್ಥಿತಿ ನಿರ್ಮಾಣವಾದರೂ,